

بسم اللہ الرّحمٰن الرّحیم

# ಹಝ್ರತ್ ಉಸ್ಮಾನ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19–03–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಅವರ ಶಹಾದತಿನ ನಂತರದ ಘಟನೆಗಳ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: ವಿದ್ರೋಹಿಗಳು ಹಝ್ರತ್ ಉಸ್ಮಾನ್(ರ)ರನ್ನು ಶಹೀದ್ ಅಂತೂ ಮಾಡಿದರು. ಅನಂತರ ಅವರ ಮೃತದೇಹವನ್ನು ದಫನ್ ಮಾಡುವುದರ ಬಗ್ಗೆಯೂ ಆಕ್ಷೇಪವೆತ್ತಿದರು. ಮೂರು ದಿನಗಳ ತನಕ ಅವರ ಮಯ್ಯತ್ತನ್ನು ದಫನ್ ಮಾಡಲಾಗಲಿಲ್ಲ. ಕೊನೆಗೆ ಸಹಾಬರ ಒಂದು ಸಂಘ ಧೈರ್ಯಗೂಡಿಸಿಕೊಂಡು ರಾತ್ರಿ ಸಮಯದಲ್ಲಿ ಅವರ ಮೃತದೇಹವನ್ನು ದಫನ್ ಮಾಡಿದರು.

ಹಝ್ರತ್ ಅಬೂ ಮೂಸಾ ಅಶ್‌ಅರಿ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ತೋಟವನ್ನು ಪ್ರವೇಶಿಸಿದರು ಮತ್ತು ನನ್ನೊಡನೆ ತೋಟದ ಪ್ರವೇಶದ್ವಾರದಲ್ಲಿ ಕಾವಲು ನಿಲ್ಲಲು ಆಜ್ಞಾಪಿಸಿದರು. ಅಷ್ಟರಲ್ಲಿ ಒಬ್ಬ ವ್ಯಕ್ತಿ ಬಂದು ಒಳಗೆ ಪ್ರವೇಶಿಸಲು ಅನುಮತಿ ಕೇಳಿದರು. ಅವರಿಗೆ ಒಳಗೆ ಬರಲು ಅನುಮತಿ ಕೊಡು ಮತ್ತು ಅವರಿಗೆ ಸ್ವರ್ಗದ ಸುವಾರ್ತೆಯನ್ನು ನೀಡು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಅವರು ಹಝ್ರತ್ ಅಬೂಬಕರ್(ರ) ಆಗಿದ್ದರು. ಅನಂತರ ಮತ್ತೊಬ್ಬ ವ್ಯಕ್ತಿ ಬಂದು ಅನುಮತಿ ಕೇಳಿದರು. ಅವರಿಗೆ ಒಳಗೆ ಬರಲು ಅನುಮತಿ ಕೊಡು ಮತ್ತು ಅವರಿಗೆ ಸ್ವರ್ಗದ ಸುವಾರ್ತೆಯನ್ನು ನೀಡು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಅವರು ಹಝ್ರತ್ ಉಮರ್(ರ) ಆಗಿದ್ದರು. ಅನಂತರ ಮತ್ತೊಬ್ಬ ವ್ಯಕ್ತಿ ಬಂದು ಅನುಮತಿ ಕೇಳಿದರು. ಆಗ ಹಝ್ರತ್ ಪೈಗಂಬರ್(ಸ) ಸ್ವಲ್ಪ ಸಮಯ ಮೌನವಾಗಿದ್ದು ಅನಂತರ ಹೇಳಿದರು: ಅವರಿಗೆ ಒಳಗೆ ಬರಲು ಅನುಮತಿ ಕೊಡು ಮತ್ತು ಅವರಿಗೆ ಸ್ವರ್ಗದ ಸುವಾರ್ತೆಯನ್ನು ನೀಡು. ಆದರೆ ಒಂದು ದೊಡ್ಡ ವಿಪತ್ತು ಅವರಿಗೆ ತಲುಪುವುದು ಎಂದು ಹೇಳಿದರು. ನಾನು ನೋಡುವಾಗ ಅವರು ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ರಝಿಯಲ್ಲಾಹು ಅನ್‌ಹು ಆಗಿದ್ದರು.

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಹದ್ ಪರ್ವತವನ್ನೇರಿದರು. ಅವರೊಂದಿಗೆ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಉಸ್ಮಾನ್(ರ) ಇದ್ದರು. ಉಹದ್ ಪರ್ವತ ಕಂಪಿಸಲು ತೊಡಗಿತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಉಹದ್, ಅಲುಗಾಡದಿರು. ನಿನ್ನ ಮೇಲೆ ಒಬ್ಬ ಪ್ರವಾದಿ, ಒಬ್ಬ ಸಿದ್ದೀಖ್ ಮತ್ತು ಇಬ್ಬರು ಶಹೀದರು ಇದ್ದಾರೆ. ವರದಿಗಾರ ಹೇಳುತ್ತಾರೆ: ಅವರು ತನ್ನ ಕಾಲನ್ನು ಸಹ ಪರ್ವತದ ಮೇಲೆ ಹೊಡೆದರು ಎಂದು ನನಗೆ ತೋರುತ್ತದೆ. ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ಪಿತೂರಿಯ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು: ಈ ವ್ಯಕ್ತಿ ಆ ಪಿತೂರಿಯಲ್ಲಿ ದೌರ್ಜನ್ಯ ಪೀಡಿತರಾದ ಸ್ಥಿತಿಯಲ್ಲಿ ವಧಿಸಲ್ಪಡುವರು. ಇದು ಅವರು ಹಝ್ರತ್ ಉಸ್ಮಾನ್(ರ)ರ ಕಡೆಗೆ ಬೆಟ್ಟು ಮಾಡುತ್ತಾ ಹೇಳಿದ್ದರು.

ಹಝ್ರತ್ ಉಸ್ಮಾನ್(ರ)ರ ಬಗ್ಗೆ ಏನಾದರೂ ಹೇಳಿರಿ ಎಂದು ಹಝ್ರತ್ ಅಲಿ ರಝಿಯಲಾಹು ಅನ್‌ಹುರೊಡನೆ ಕೇಳಲಾಯಿತು. ಅವರು ಹೇಳಿದರು: ಹಝ್ರತ್ ಉಸ್ಮಾನ್(ರ) ಎಂತಹ ವ್ಯಕ್ತಿಯಾಗಿದ್ದರು ಎಂದರೆ, ಅವರು ಅಲ್ಲಾಹನ ಸನ್ನಿಧಿಯಲ್ಲೂ ಧ್ಜುನ್ನೂರೈನ್ ಆಗಿದ್ದರು. ಎಂದರೆ, ಎರಡು ಪ್ರಕಾಶಗಳನ್ನು ಹೊಂದಿರುವ ವ್ಯಕ್ತಿ. ಅವರು ನಮ್ಮಲಿ ಅತ್ಯಂತ ಹೆಚ್ಚು ಸಂಬಂಧವನ್ನು ಜೋಡಿಸುವವರಾಗಿದ್ದರು. ಹಝ್ರತ್ ಆಯಿಶ(ರ)ರಿಗೆ ಹಝ್ರತ್ ಉಸ್ಮಾನ್‌ರ ಶಹಾದತಿನ ಸುದ್ದಿ ಮುಟ್ಟಿದಾಗ ಅವರು ಹೇಳಿದರು: ಆ ಜನರು ಹಝ್ರತ್ ಉಸ್ಮಾನ್‌ರನ್ನು ವಧಿಸಿದರು. ಅವರಾದರೋ ಅವರೆಲ್ಲರಿಗಿಂತಲೂ ಹೆಚ್ಚು ಸಂಬಂಧವನ್ನು ಜೋಡಿಸುವವರೂ ಅವರೆಲ್ಲರಿಗಿಂತಲೂ ಹೆಚ್ಚು ಅಲ್ಲಾಹನ ಭಯಭಕ್ತಿಯನ್ನು ಹೊಂದಿರುವವರೂ ಆಗಿದ್ದರು.

ಅಲ್‌ಇಸ್ತೀಆಬ್‌ನಲ್ಲಿ ಹೀಗೆ ಬರೆಯಲಾಗಿದೆ - "ನನ್ನ ಅಳಿಯನಾದ ಅಥವಾ ಯಾರ ಅಳಿಯನು ನಾನು ಆಗಿರುವೆನೋ ಅಂತಹ ಯಾವನೇ ವ್ಯಕ್ತಿಯನ್ನು ಬೆಂಕಿಯಲ್ಲಿ ಪ್ರವೇಶಗೊಳಿಸಬೇಡ" ಎಂದು ಅತ್ಯುನ್ನತನಾದ ಅಲ್ಲಾಹನೊಡನೆ ತಾನು ದುಆ ಮಾಡಿದ್ದಾಗಿ ಹಝ್ರತ್ ಪೈಗಂಬರ್(ಸ) ಹೇಳಿದರು.

ಹಝ್ರತ್ ಉಸ್ಮಾನ್‌ರ ದೇಹರೂಪದ ಬಗ್ಗೆ ಹೀಗೆ ಬರೆಯಲಾಗಿದೆ: ಅವರ ಶರೀರ ಗಿಡ್ಡವೂ ಆಗಿರಲಿಲ್ಲ, ಬಹಳ ಹೆಚ್ಚು ಉದ್ದವೂ ಆಗಿರಲಿಲ್ಲ. ಅವರ ಮುಖ ಸುಂದರ, ಚರ್ಮ ಮೃದು, ಗಡ್ಡ ದಟ್ಟ ಮತ್ತು ಉದ್ದವಾಗಿತ್ತು, ಮೈಬಣ್ಣ ಗೋದಿ ವರ್ಣದ್ದಾಗಿತ್ತು, ಶಕ್ತವಾದ ಕೀಲುಗಳನ್ನು ಹೊಂದಿದ್ದರು, ಅಗಲವಾದ ಭುಜಗಳು, ದಟ್ಟವಾದ ತಲೆಗೂದಲುಗಳನ್ನು ಹೊಂದಿದ್ದರು. ಅವರು ಗಡ್ಡಕ್ಕೆ ಹಳದಿ ಬಣ್ಣವನ್ನು ಹಚ್ಚುತ್ತಿದ್ದರು. ಮೂಸಾ ಬಿನ್ ತಲ್‌ಹ ಹೇಳುತ್ತಾರೆ: ಹಝ್ರತ್ ಉಸ್ಮಾನ್(ರ) ಎಲ್ಲ ಜನರಿಗಿಂತ ಹೆಚ್ಚು ಸುಂದರವಾಗಿದ್ದರು. ಸ್ವರ್ಗದ ಸುವಾರ್ತೆ ಲಭಿಸಿದ್ದ ಹತ್ತು ವಿಶಿಷ್ಟ ವ್ಯಕ್ತಿಗಳಲ್ಲೂ ಅವರು ಸೇರಿದ್ದರು.

ಸ್ವರ್ಗದಲ್ಲಿ ಹಝ್ರತ್ ಉಸ್ಮಾನ್‌ರೊಂದಿಗೆ ಹಝ್ರತ್ ಪೈಗಂಬರ್(ಸ)ರ ಸ್ನೇಹ ಸಂಬಂಧದ ಬಗ್ಗೆ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಪ್ರತಿಯೊಬ್ಬ ಪ್ರವಾದಿಗೆ ಒಬ್ಬ

ಸ್ನೇಹಿತನಿರುತ್ತಾನೆ.. ಸ್ವರ್ಗದಲ್ಲಿ ನನ್ನ ಸ್ನೇಹಿತ ಉಸ್ಮಾನ್ ಆಗಿರುವರು. ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಒಂದು ಸಲ ನಾವು ಹಝ್ರತ್ ಪೈಗಂಬರ್(ಸ)ರ ಜೊತೆಗೆ ಒಂದು ಮನೆಯಲ್ಲಿ ಮುಹಾಜಿರರ ಒಂದು ಸಂಘದೊಂದಿಗೆ ಇದ್ದೆವು. ಅವರಲ್ಲಿ ಅಬೂಬಕರ್, ಉಮರ್, ಉಸ್ಮಾನ್, ಅಲಿ, ತಲ್ಹ, ಝುಬೇರ್, ಅಬ್ದುರ್ರಹ್ಮಾನ್ ಬಿನ್ ಔಫ್ ಮತ್ತು ಸಅದ್ ಬಿನ್ ಅಬೀ ವಖಾಸ್ (ರಿಝ್ವಾನುಲ್ಲಾಹಿ ಅಲೈಹಿಂ) ಇದ್ದರು. ಹೀಗಿರುವಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಪ್ರತಿಯೊಬ್ಬ ವ್ಯಕ್ತಿ ತನಗೆ ಸರಿಹೋಲುವ ವ್ಯಕ್ತಿಯೊಂದಿಗೆ ನಿಲ್ಲಿರಿ. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರೊಂದಿಗೆ ನಿಂತರು ಮತ್ತು ಅವರನ್ನು ಆಲಿಂಗಿಸಿದರು ಹಾಗೂ ಹೀಗೆ ಹೇಳಿದರು: **ಅಂತ ವಲಿಯ್ಯಿ ಫಿದ್ದುನ್‌ಯಾ ವ ವಲಿಯ್ಯಿ ಫಿಲ್ ಆಖಿರತಿ**. ಎಂದರೆ, ನೀನು ಇಹಲೋಕದಲ್ಲೂ ಪರಲೋಕದಲ್ಲೂ ನನ್ನ ಸ್ನೇಹಿತನಾಗಿರುವೆ.

ಹಝ್ರತ್ ಪೈಗಂಬರ್(ಸ)ರ ಜೀವಿತದಲ್ಲಿ ಮಸ್ಜಿದ್ ನಬವಿಯನ್ನು ವಿಸ್ತಾರಗೊಳಿಸಲಾಗಿತ್ತು. ಅದರಲ್ಲೂ ಹಝ್ರತ್ ಉಸ್ಮಾನ್‌ರಿಗೆ ಭಾಗಿಯಾಗುವ ಸೌಭಾಗ್ಯ ಸಿಕ್ಕಿತ್ತು. ಹಿಜರಿ 1ರ, ರಬೀಉಲ್ ಅವ್ವಲ್ ತಿಂಗಳ (ಕ್ರಿ.ಶ. 622, ಅಕ್ಟೋಬರ್) ಕೊನೆಯಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಅನುಗ್ರಹೀತ ಕೈಗಳಿಂದ ಮಸ್ಜಿದ್ ನಬವಿಯ ಅಡಿಗಲ್ಲನ್ನು ಹಾಕಿದ್ದರು. ಹಿಜರಿ 1ರ, ಶವ್ವಾಲ್ ತಿಂಗಳಲ್ಲಿ (ಕ್ರಿ.ಶ. 623, ಎಪ್ರಿಲ್) ನಿರ್ಮಾಣ ಕೆಲಸ ಪೂರ್ಣವಾಯಿತು. ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಮಸ್ಜಿದ್ ನಬವಿಯ ಮೊದಲ ವಿಸ್ತರಣೆ ಮತ್ತು ಪುನರ್ನಿರ್ಮಾಣದ ಕೆಲಸ ಹಿಜರಿ 7ರ ಮುಹರ್ರಂ ತಿಂಗಳಲ್ಲಿ (ಕ್ರಿ.ಶ. 628, ಜೂನ್‌ನಲ್ಲಿ) ನಡೆಯಿತು. ಹಝ್ರತ್ ಪೈಗಂಬರ್(ಸ) ಖೈಬರ್ ಯುದ್ಧದಿಂದ ವಿಜಯಿಯಾಗಿ ಮರಳಿದಾಗ, ಅವರು ಮಸ್ಜಿದ್ ನಬವಿಯ ವಿಸ್ತರಣೆ ಮತ್ತು ಪುನರ್ನಿರ್ಮಾಣವನ್ನು ಮಾಡಲು ಆದೇಶಿಸಿದರು. ಮಸ್ಜಿದ್ ನಬವಿಯ ಉತ್ತರ ದಿಕ್ಕಿನಲ್ಲಿ ಒಬ್ಬ ಅನ್ಸಾರಿ ಸಹಾಬಿಯ ಮನೆಯಿತ್ತು. ಅವರಿಗೆ ತನ್ನ ಮನೆಯನ್ನು ಮಸೀದಿಗೆ ಬಿಟ್ಟುಕೊಡಲು ಸ್ವಲ್ಪ ಹಿಂಜರಿಕೆ ಇತ್ತು. ಹಝ್ರತ್ ಉಸ್ಮಾನ್(ರ) ತನ್ನ ಜೇಬಿನಿಂದ ಹತ್ತು ಸಾವಿರ ದಿನಾರ್ ಕೊಟ್ಟು ಆ ಮನೆಯನ್ನು ಖರೀದಿ ಮಾಡಿ ಹಝ್ರತ್ ಪೈಗಂಬರ್(ಸ)ರ ಮುಂದೆ ಇರಿಸಿದರು. ಹಝ್ರತ್ ಪೈಗಂಬರ್(ಸ) ಅದನ್ನು ಮಸೀದಿಯಲ್ಲಿ ಸೇರಿಸಿದರು.

ಮಸ್ಜಿದ್ ನಬವಿಯ ಎರಡನೇ ವಿಸ್ತರಣೆ ಹಝ್ರತ್ ಉಮರರ ಕಾಲದಲ್ಲಿ ಹಿಜರೀ 17ರಲ್ಲಿ ನಡೆಯಿತು. ಹಝ್ರತ್ ಉಸ್ಮಾನ್(ರ) ಹಿಜರೀ 24ರಲ್ಲಿ ಖಲೀಫರಾಗಿ ಚುನಾಯಿತರಾದಾಗ ಜನರು, ಅಂಗಳ ಸಣ್ಣದಾಗಿದೆ ಎಂದು ದೂರುತ್ತಾ ಮಸೀದಿಯನ್ನು ವಿಸ್ತಾರಗೊಳಿಸಲು ವಿನಂತಿಸಿದರು. ಹಝ್ರತ್ ಉಸ್ಮಾನ್(ರ) ಸಹಾಬರೊಡನೆ ಸಮಾಲೋಚನೆ ನಡೆಸಿದರು. ಹಳೆಯ ಮಸೀದಿಯನ್ನು ಕೆಡವಿ ಅದರ ಜಾಗದಲ್ಲಿ ಹೊಸ ಮಸೀದಿಯನ್ನು ನಿರ್ಮಿಸಬೇಕೆಂದು ಎಲ್ಲರೂ ಅಭಿಪ್ರಾಯಪಟ್ಟರು. ಒಂದು ದಿನ ಝುಹರ್ ನಮಾಝಿನ ನಂತರ ಹಝ್ರತ್ ಉಸ್ಮಾನ್ ಹೇಳಿದರು: ನಾನು ಮಸೀದಿಯನ್ನು ಕೆಡವಿ ಅದರ ಜಾಗದಲ್ಲಿ ಹೊಸ ಮಸೀದಿಯನ್ನು ಮಾಡಲು ಬಯಸುತ್ತಿದ್ದೇನೆ. ನಾನು ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಕ್ಕೆ ಸಾಕ್ಷಿ ಹೇಳುತ್ತೇನೆ: ಯಾರು ಮಸೀದಿ ನಿರ್ಮಾಣ ಮಾಡುತ್ತಾನೋ ಅವನಿಗೆ ಅಲ್ಲಾಹನು ಸ್ವರ್ಗದಲ್ಲಿ ಒಂದು ಮನೆಯನ್ನು ದಯಪಾಲಿಸುತ್ತಾನೆ. ನನಗಿಂತ ಮುಂಚೆ ಹಝ್ರತ್ ಉಮರ್ ಫಾರೂಖ್(ರ)ರ ಕೈಗಳಿಂದ ಮಸ್ಜಿದ್ ನಬವಿಯ ವಿಸ್ತರಣೆ ಮತ್ತು ಪುನರ್ನಿರ್ಮಾಣ ನನಗೆ ಒಂದು ಮಾದರಿ ಮತ್ತು ಉದಾಹರಣೆಯಾಗಿದೆ. ನಾನು ಉತ್ತಮ ಸಲಹೆಗಾರರಾದ ಸಹಾಬಿಗಳೊಡನೆ ಸಮಾಲೋಚನೆ ನಡೆಸಿದೆ. ಮಸ್ಜಿದ್ ನಬವಿಯನ್ನು ಕೆಡವಿ ಅದನ್ನು ಪುನಃ ನಿರ್ಮಿಸಬೇಕು ಎಂಬುದಾಗಿದೆ ಅವರೆಲ್ಲರ ಒಮ್ಮತಾಭಿಪ್ರಾಯ. ಆಗ ಕೆಲವು ಆದರಣೀಯ ಸಹಾಬಿಯರು ಈ ವಿಷಯದಲ್ಲಿ ತಮ್ಮ ಆಕ್ಷೇಪಗಳನ್ನು ಮುಂದಿರಿಸಿದರು. ಮಸೀದಿಯನ್ನು ಕೆಡವಬಾರದು ಎಂದಾಗಿತ್ತು ಅವರ ಅಭಿಪ್ರಾಯ. ಹಝ್ರತ್ ಉಸ್ಮಾನ್(ರ) ಜನರ ಸಮ್ಮತಿಯನ್ನು ಪಡೆಯುವುದರಲ್ಲಿ ಯಶಸ್ವಿಯಾದಾಗ, ಅವರು ಹಿಜರೀ 29ರ ರಬೀಉಲ್ ಅವ್ವಲ್ ತಿಂಗಳಲ್ಲಿ (ಕ್ರಿ.ಶ. 649, ನವೆಂಬರ್) ಕೆಲಸವನ್ನು ಶುರುಮಾಡಿದರು. ಪುನರ್ನಿರ್ಮಾಣದ ಕೆಲಸಕ್ಕೆ ಕೇವಲ 10 ತಿಂಗಳುಗಳ ಕಾಲ ತಗುಲಿತ್ತು. ಹೀಗೆ ಹಿಜರೀ 30ರ ಮುಹರ್ರಂ ತಿಂಗಳಲ್ಲಿ ಮಸ್ಜಿದ್ ನಬವೀ ತಯಾರಾಯಿತು.

ಹಝ್ರತ್ ಉಸ್ಮಾನ್(ರ) ಸ್ವತಃ ಕೆಲಸದ ಮೇಲ್ನೋಟವಹಿಸುತ್ತಿದ್ದರು. ಹಗಲು ಸಮಯದಲ್ಲಿ ಸದಾ ಉಪವಾಸವಿರುತ್ತಿದ್ದರು. ರಾತ್ರಿ ಸಮಯದಲ್ಲಿ ತುಂಬ ನಿದ್ರೆ ಬಂದರೆ, ಮಸ್ಜಿದ್ ನಬವಿಯಲ್ಲೇ ವಿಶ್ರಾಂತಿ ಪಡೆಯುತ್ತಿದ್ದರು. ಹಝ್ರತ್ ಉಸ್ಮಾನ್(ರ) ಮಸ್ಜಿದ್ ನಬವಿಯ ದಕ್ಷಿಣ ದಿಕ್ಕಿನಲ್ಲಿ ಖಿಬ್ಲದ ಭಾಗವನ್ನು ವಿಸ್ತಾರಗೊಳಿಸಿದರು. ಖಿಬ್ಲದ ಕಡೆಯ ಗೋಡೆಯನ್ನು ಇಂದು ಅದು ಇರುವ ತನಕ ವಿಸ್ತರಿಸಿದರು. ಹಝ್ರತ್ ಉಸ್ಮಾನ್‌ರ ಕಾಲದಲ್ಲಿ ಮಸೀದಿಯ ಬಾಗಿಲುಗಳ ಸಂಖ್ಯೆ ಆರಾಗಿತ್ತು. ಮೊದಲ ಬಾರಿಗೆ ಮಸ್ಜಿದ್ ನಬವಿಯಲ್ಲಿ ಕಲ್ಲುಗಳ ಮೇಲೆ ಅಲಂಕಾರಗಳನ್ನು ಮಾಡಲಾದುವು. ಅದರಲ್ಲಿ ಸುಣ್ಣ ಬಳಿಯಲಾಯಿತು. ಹಝ್ರತ್ ಖಾರ್‌ಜ ಬಿನ್ ಝೈದ್‌ರ ವರದಿಯ ಪ್ರಕಾರ ಹಝ್ರತ್ ಉಸ್ಮಾನ್(ರ) ಮಸ್ಜಿದ್ ನಬವಿಯ ಪೂರ್ವ ಮತ್ತು ಪಶ್ಚಿಮದ ಗೋಡೆಗಳಲ್ಲಿ ಕಿಟಕಿಗಳನ್ನು ಅಳವಡಿಸಿದ್ದರು. ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ಕಾಲದಲ್ಲಿ ಖರ್ಜೂರ ಮರದಿಂದ ತಯಾರಿಸಲಾದ ಕಂಬಗಳು ಇದ್ದ ಸ್ಥಳದಲ್ಲೇ ಹೊಸ ಕಂಬಗಳನ್ನು ನಿರ್ಮಾಣ ಮಾಡುವಂತೆ ವಿಶೇಷವಾಗಿ ಗಮನವಹಿಸಲಾಗಿತ್ತು. ಹಝ್ರತ್ ಪೈಗಂಬರ್(ಸ)ರ ಮಿಹ್ರಾಬ್‌ನಲ್ಲಿ ನಿಂತುಕೊಂಡು ನಮಾಝಿನ ಇಮಾಮತ್ ಮಾಡುತ್ತಿದ್ದ ವೇಳೆ ಹಝ್ರತ್ ಉಮರ್(ರ)ರ ಶಹಾದತ್ ನಡೆದಿತ್ತು. ಇಂತಹ ದುರ್ಘಟನೆ ಇನ್ನು ಮುಂದೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಮಿಹ್ರಾಬಿನ ಜಾಗದಲ್ಲಿ ಮಣ್ಣಿನ ಇಟ್ಟಿಗೆಗಳಿಂದ ತಯಾರಿಸಲಾದ ಒಂದು ಪ್ರತ್ಯೇಕ ಸ್ಥಳವನ್ನು ತಯಾರಿಸಲಾಯಿತು. ಇಮಾಮಿನ ಹಿಂದೆ ಇರುವವರು ಇಮಾಮನ್ನು ನೋಡುವಂತಾಗಲು ಅದರಲ್ಲಿ ಸಣ್ಣ ಕಂಡಿಗಳನ್ನು ಸಹ ಮಾಡಲಾಗಿತ್ತು. ಇದು ಮಸ್ಜಿದ್ ನಬವಿಯಯಲ್ಲಿ ನಿರ್ಮಿಸಲಾದ ಮೊದಲ ಸುರಕ್ಷಾ ಕ್ರಮವಾಗಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ಹಝ್ರತ್ ಉಸ್ಮಾನ್‌ರನ್ನು ಹಝ್ರತ್ ಸುಲೈಮಾನ್‌ರಿಗೆ ಹೋಲಿಸುತ್ತೇನೆ. ಅವರಿಗೂ ಕಟ್ಟಡ ನಿರ್ಮಾಣದ ಬಹಳ ಆಸಕ್ತಿಯಿತ್ತು. ಮಸೀದಿ ಅಲಂಕರಿಸಲ್ಪಟ್ಟಿರಬೇಕು ಮತ್ತು

ಇಟ್ಟಿಗೆಯಿಂದ ಅಥವಾ ಕಲ್ಲಿನಿಂದಲೇ ಕಟ್ಟಿರಬೇಕೆಂದೇನೂ ಇಲ್ಲ. ನೆಲದಲ್ಲಿ ಮಸೀದಿಯ ತಳಪಾಯ ಗುರುತಿಸಿ ಬಿದಿರು ಇತ್ಯಾದಿಗಳ ಚಪ್ಪರವನ್ನು ಹಾಕಿದರೆ, ಮಳೆ ಇತ್ಯಾದಿಗಳಿಂದ ರಕ್ಷಣೆ ಪಡೆಯಬಹುದು. ಅಲ್ಲಾಹನು ಔಪಚಾರಿಕತೆಯನ್ನು ಇಷ್ಟಪಡುವುದಿಲ್ಲ. ಹಝ್ರತ್ ಪೈಗಂಬರ್(ಸ)ರ ಮಸೀದಿ ಖರ್ಜೂರದ ಕೆಲವು ಕೊಂಬೆಗಳಿಂದ ನಿರ್ಮಿಸಿದ್ದಾಗಿತ್ತು. ಅದು ಹಾಗೆಯೇ ಮುಂದುವರೆಯಿತು. ಅನಂತರ ಹಝ್ರತ್ ಉಸ್ಮಾನ್‌ರಿಗೆ ಕಟ್ಟಡ ನಿರ್ಮಾಣದ ಅಭಿರುಚಿಯಿದ್ದ ಕಾರಣ ಅವರ ಕಾಲದಲ್ಲಿ ಅದನ್ನು ಇಟ್ಟಿಗೆಯಿಂದ ಕಟ್ಟಿ ಗಟ್ಟಿಗೊಳಿಸಿದರು. ಹಝ್ರತ್ ಉಸ್ಮಾನ್ ಮತ್ತು ಹಝ್ರತ್ ಸುಲೈಮಾನ್‌ರ ನಡುವೆ ಬಹಳ ಗುಣ ಸಾಮ್ಯತೆ ಇದೆ ಎಂದು ನನಗೆ ಅನಿಸುತ್ತಿರುತ್ತದೆ. ಬಹುಶಃ ಇದೇ ಹೊಂದಾಣಿಕೆಯ ಕಾರಣದಿಂದ ಅವರಿಗೂ ಇದರ ಆಸಕ್ತಿ ಇದ್ದಿರಬೇಕು.

ಇಸ್ಲಾಮಿನ ಮೊದಲ ಹಡಗುಪಡೆ ಹಿಜರೀ 28ರಲ್ಲಿ ಹಝ್ರತ್ ಉಸ್ಮಾನ್‌ರ ಕಾಲದಲ್ಲಿ ಮಾಡಲಾಗಿತ್ತು. ಹಝ್ರತ್ ಉಸ್ಮಾನ್‌ರ ಖಿಲಾಫತ್ ಕಾಲದಲ್ಲಿ, ನೌಕಾ ಯುದ್ಧ ನಡೆಸಿದ ಮೊದಲ ವ್ಯಕ್ತಿ ಅಮೀರ್ ಮುಆವಿಯಾ ಆಗಿದ್ದರು.

ಸ್ವಭಾವಗುಣಗಳಲ್ಲಿ ಹಝ್ರತ್ ಪೈಗಂಬರರೊಂದಿಗೆ ಅತ್ಯಂತ ಹೆಚ್ಚು ಸಾಮ್ಯತೆ ಹಝ್ರತ್ ಉಸ್ಮಾನ್‌ರಿಗೆ ಇತ್ತು ಎಂದು ವರದಿಗಳಲ್ಲಿ ಬರುತ್ತವೆ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಉಸ್ಮಾನ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಒಮ್ಮೆ ತನ್ನ ಮಗಳ ಬಳಿಗೆ ಹೋದರು. ಆ ಸಮಯದಲ್ಲಿ ಅವರು ಹಝ್ರತ್ ಉಸ್ಮಾನ್‌ರ ತಲೆಯನ್ನು ತೊಳೆಯುತ್ತಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ನನ್ನ ಮಗಳೇ, ಅಬೂ ಅಬ್ದುಲ್ಲಾಹ್, ಎಂದರೆ ಉಸ್ಮಾನ್‌ರೊಂದಿಗೆ ಉತ್ತಮವಾಗಿ ವರ್ತಿಸು, ಏಕೆಂದರೆ ಅವರು ನನ್ನ ಸಹಾಬರಲ್ಲಿ ಸ್ವಭಾವಗುಣಗಳ ದೃಷ್ಟಿಯಲ್ಲಿ ನನ್ನೊಂದಿಗೆ ಅತ್ಯಂತ ಹೆಚ್ಚು ಸಾಮ್ಯತೆಯನ್ನು ಹೊಂದಿರುವರು. ಹಝ್ರತ್ ಯಹ್ಯಾ ಬಿನ್ ಅಬ್ದುರ್ರಹ್ಮಾನ್ ಬಿನ್ ಹಾತಿಬ್ ವರದಿ ಮಾಡುತ್ತಾರೆ: ನನ್ನ ತಂದೆ ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ಮಾತುಗಳನ್ನು ಸಂಪೂರ್ಣವಾಗಿಯೂ ಸುಂದರವಾಗಿಯೂ ಹೇಳುವುದರಲ್ಲಿ ಹಝ್ರತ್ ಉಸ್ಮಾನ್‌ರಿಗಿಂತ ಉತ್ತಮವಾಗಿ ನಾನು ಯಾರನ್ನೂ ಕಂಡಿಲ್ಲ. ಆದಾಗ್ಯೂ ಅವರು ಹೆಚ್ಚು ಮಾತನಾಡುವುದರಿಂದ ದೂರವಿರುತ್ತಿದ್ದರು. ಹಝ್ರತ್ ಅಬೂಹುರೈರ ವರದಿ ಮಾಡುತ್ತಾರೆ: ನಾನು ಹಝ್ರತ್ ಉಸ್ಮಾನ್‌ರ ಪತ್ನಿಯಾದ ಹಝ್ರತ್ ಪೈಗಂಬರ್(ಸ)ರ ಮಗಳ ಬಳಿಗೆ ಹೋದೆ. ಅವರ ಕೈಯಲ್ಲಿ ಬಾಚಣಿಕೆ ಇತ್ತು. ಅವರು ಹೇಳಿದರು: ಈಗಷ್ಟೆ ಹಝ್ರತ್ ಪೈಗಂಬರ್(ಸ) ಇಲ್ಲಿಂದ ಹೋಗಿರುವರು. ನಾನು ಅವರ ತಲೆಯನ್ನು ಬಾಚಿದೆ. ಆಗ ಹಝ್ರತ್ ಉಸ್ಮಾನ್‌ರನ್ನು ಹೇಗೆ ಕಾಣುತ್ತೀ ಎಂದು ಅವರು ನನ್ನೊಡನೆ ಕೇಳಿದರು. ಬಹಳ ಉತ್ತಮ ಎಂದು ನಾನು ಹೇಳಿದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ, ನೀನು ಸಹ ಅವರೊಡನೆ ಗೌರವಭಾವದಿಂದ ವರ್ತಿಸು. ಏಕೆಂದರೆ, ಅವರು ನನ್ನ ಸಹಾಬರಲ್ಲಿ ಸ್ವಭಾವಗುಣಗಳ ದೃಷ್ಟಿಯಲ್ಲಿ ನನ್ನೊಂದಿಗೆ ಅತ್ಯಂತ ಹೆಚ್ಚು ಸಾಮ್ಯತೆಯನ್ನು ಹೊಂದಿರುವರು.

(ಹುಝೂರ್ ಹೇಳಿದರು:) ಹಝ್ರತ್ ಉಸ್ಮಾನ್‌ರ ಪ್ರಸ್ತಾಪವನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತೇನೆ.

(ಖುತ್‌ಬದ ಕೊನೆಯಲ್ಲಿ ಹುಝೂರ್, ಇತ್ತೀಚೆಗೆ ನಿಧನರಾದ ಮುಕರ್‍ರಮ್ ಮುಬಶ್ಶಿರ್ ಅಹ್ಮದ್ ಸಾಹಿಬ್ ಮುಅಲ್ಲಿಂ ರಬ್ವ, ಇಸ್ಲಾಮಾಬಾದ್ ಜಿಲ್ಲೆಯ ಮಾಜಿ ಅಮೀರ್ ಮುಕರ್‍ರಮ್ ಮುನೀರ್ ಅಹ್ಮದ್ ಫರಖ್ ಸಾಹಿಬ್, ರಾವಲ್‌ಪಿಂಡಿ ಜಿಲ್ಲೆಯ ಮಾಜಿ ಅಮೀರ್ ಆಗಿದ್ದ ನಿವೃತ್ತ ಬ್ರಿಗೇಡಿಯರ್ ಮುಕರ್‍ರಮ್ ಮುಹಮ್ಮದ್ ಲತೀಫ್ ಸಾಹಿಬ್ ಇವರ ಸದ್ಗುಣಗಳನ್ನು ಸ್ಮರಿಸಿ, ಜುಮುಅ ನಮಾಝ್ ಬಳಿಕ ಅವರ ಜನಾಝ ನಮಾಝ್ ಗಾಯಿಬ್ ನಿರ್ವಹಿಸಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 19-03-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha’at Team for Nazarath Nashr-O-Isha’ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon